॥ ಶ್ರೀ ಸದ್ಗುರವೇ ನಮಃ ॥

# ಪಿಂಡ ಬ್ರಹ್ಮಾಂಡಗಳಲ್ಲಿ ಸಕಾರಾತ್ಮಕ ಊರ್ಜಾ ವೃದ್ಧಿ





**ಉ**ಪನಿಷತ್ತಿನ ಪ್ರಕಾರ ಈ ಬ್ರಹ್ಮಾಂಡವು ಪಂಚ ಮಹಾಭೂತಗಳ ಸಂಯೋಗದಿಂದ ರಚಿಸಲ್ಪಟ್ಟಿದ್ದು, ಪಂಚ ಮಹಾಭೂತಗಳೇ ಜೀವ ಮತ್ತು ಬ್ರಹ್ಮಾಂಡದ ರಕ್ಷಣೆಗಾಗಿ ಕಾರ್ಯಗತವಾಗಿರುತ್ತವೆ.

ಭಗವಂತನು ನಮ್ಮ ಏಳಿಗೆಗಾಗಿಯೇ ಅವುಗಳನ್ನು ರಚಿಸಿದ್ದಾನೆ. ಆದರೆ ಭಗವತ್ ಸೃಷ್ಟಿಯ ಮೇಲೆ ನಮ್ಮ ಸೃಷ್ಟಿಯನ್ನು ನಿಸರ್ಗ ವಿರೋಧವಾಗಿ ರಚಿಸಿದಾಗ ಹಾಗೂ ವಿಧಿ ನಿಯಮವನ್ನು ಬಿಟ್ಟು ಮನುಷ್ಯನು ತನ್ನ ನಿದ್ರಾ, ಆಹಾರ, ವಿಹಾರಾದಿಗಳನ್ನು ಮಾಡಿದಾಗ ಹಾಗೂ ಸಂಚಿತ, ಆನುವಂಶಿಕ, ಪ್ರಾರಬ್ಧ, ವರ್ತಮಾನದಲ್ಲಿ ಮಾಡುತ್ತಿರುವ ಕರ್ಮ, ಹುಟ್ಟಿದ ಸಮಯದಲ್ಲಿ ನಭೋಮಂಡಲದಲ್ಲಿಯ ಗ್ರಹಸ್ಥಿತಿಗನುಗುಣವಾಗಿಯೂ ಮನುಷ್ಯನಲ್ಲಿ ಅಸಂತುಲನವು ಏರ್ಪಡುತ್ತದೆ.



ಇದನ್ನು ಮನೆಗಾಗಿ ಸಂತುಲನ ಮಾಡುವ ವಿಧಾನಕ್ಕೆ ವಾಸ್ತುವೆಂದು ಹಾಗೂ ಮನುಷ್ಯನ ಅಭಿವೃದ್ಧಿಗಾಗಿ ಮಾಡುವ ವಿಧಾನಕ್ಕೆ ಮೂಲಾಧಾರಾದಿ ಷಟ್‌ಚಕ್ರಗಳ ಸಂತುಲನ ಎಂದೂ ಹೇಳುತ್ತಾರೆ. ಯೋಗ ಸಾಧನೆ, ಅನುಷ್ಠಾನ, ಜಪತಪಾದಿಗಳು, ಹೀಲಿಂಗ್ ಇತ್ಯಾದಿ ವಿವಿಧ ಪ್ರಕಾರಗಳು ಪ್ರಸ್ತುತ ಪ್ರಚಾರದಲ್ಲಿವೆ. ದೇಹದಲ್ಲಿ ಪೃಥ್ವೀ ತತ್ವವು ಮೂಲಾಧಾರ ಚಕ್ರದಲ್ಲಿ, ಅಪ್ ನೀರು ಸ್ವಾಧಿಷ್ಠಾನದಲ್ಲಿ, ಅಗ್ನಿಯು ಮಣಿಪುರದಲ್ಲಿ, ವಾಯುವು ಅನಾಹತದಲ್ಲಿ, ಆಕಾಶತತ್ವವು ವಿಶುದ್ಧಿ ಚಕ್ರದಲ್ಲಿ, ವಾಸ್ತುವಿನಲ್ಲಿ ಇವುಗಳನ್ನೇ ಸಂತುಲನ ಮಾಡುವುದಕ್ಕಾಗಿಯೇ ವಾಸ್ತುಶಾಸ್ತ್ರ ಹೇಳಲ್ಪಟ್ಟಿದೆ. ಮನೆ, ಕಾರ್ಯಾಲಯ, ಕಾರ್ಖಾನೆ, ದೇವಸ್ಥಾನ, ಆಸ್ಪತ್ರೆ ಇತ್ಯಾದಿ ಎಲ್ಲಾ ಕಡೆಯಲ್ಲಿಯೂ ವಾಸ್ತು ಅವಶ್ಯಕ. ಅಲ್ಲಲ್ಲಿಯ ಸಂತುಲನ ಪ್ರಕಾರ ಬೇರೆ ದೇಶ, ಕಾಲ, ಜಾಗದ ಅಭಾವ, ಶ್ರದ್ಧೆಯ ಅಭಾವ, ಜ್ಞಾನದ ಅಭಾವ, ಮೊದಲೇ ತಯಾರಾದ ಕಟ್ಟಡವನ್ನು ಖರೀದಿಸುವ ಪರಿಸ್ಥಿತಿಯಿಂದ ನೂರಕ್ಕೆ ನೂರು ಈ ಕಾಲದಲ್ಲಿ ಸಾಧ್ಯವಾಗುವುದಿಲ್ಲವೆಂಬುದು ನಿಜಕ್ಕೂ ಒಪ್ಪಲೇಬೇಕು. ಆದರೆ ಕೆಡವದೆ ಪುನಃ ಕಟ್ಟದೇ ಇದ್ದದ್ದು ಇದ್ದ ಹಾಗೆ ಸಕಾರಾತ್ಮಕ ಊರ್ಜೆಯನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಹಾಗೂ ನಕಾರಾತ್ಮಕ ಶಕ್ತಿಯನ್ನು ಹೊರಹಾಕುವ ಮೂಲಕ, ಸರಿಪಡಿಸುವ ವಿಧಾನಕ್ಕೆ ಊರ್ಜಾ ವಾಸ್ತು ಎನ್ನುತ್ತಾರೆ. ಊರ್ಜಾ ವಾಸ್ತು ಅಥವಾ ಶರೀರದಲ್ಲಿ ಪಂಚ ಮಹಾಭೂತಗಳ ಸಂತುಲನೆಯ ಮೂಲ ಸ್ರೋತ ಸೂರ್ಯ. ಸೂರ್ಯನು ತನ್ನ ಕಿರಣಗಳಲ್ಲಿನ ಏಳು ಬಣ್ಣಗಳನ್ನು ಉಳಿದ ಎಂಟು ಗ್ರಹಗಳ ಮೇಲೆ ಪ್ರವಾಹಿಸಿದಾಗ ಅವು ಸ್ವತಃ ಪ್ರಕಾಶಿತರಾಗಿ ತಮ್ಮ ಕಿರಣಗಳನ್ನು ಬ್ರಹ್ಮಾಂಡದ ಮೇಲೆ ಪ್ರವಹಿಸುತ್ತವೆ, ಅವೇ ಕಾಮನ ಬಿಲ್ಲಿನಲ್ಲಿರುವ ಏಳು ಬಣ್ಣಗಳು. ಅವೇ ಶರೀರಕ್ಕೆ ಹಾಗೂ ವಾಸ್ತುವಿಗೆ ಶಕ್ತಿಯನ್ನು ತುಂಬುವವು. ನಮ್ಮ ಜನ್ಮ ಸಮಯದ ಗ್ರಹಸ್ಥಿತಿಗನುಗುಣವಾಗಿ ಷಟ್ ಚಕ್ರಗಳಲ್ಲಿ ಸೂರ್ಯನಿಂದ ಪ್ರಾಪ್ತವಾಗುವ ವರ್ಣಗಳನ್ನು ಆಕರ್ಷಿಸುವ ಶಕ್ತಿ ಏರ್ಪಡುವುದರಿಂದ ಜನ್ಮ ಸಮಯದ ನಭೋಮಂಡಲದಲ್ಲಿನ ಗ್ರಹಸ್ಥಿತಿ ಮಹತ್ವದ್ದಾಗಿರುತ್ತದೆ. ಅಸ್ತಂಗತ, ಶತ್ರುಸ್ಥಾನಗತ, ನೀಚರಾಶಿಸ್ಥಿತ, ಪಾಪ ದೃಷ್ಟ ಗ್ರಹಗಳ ಬಣ್ಣ ಗ್ರಹಣ ಮಾಡುವ ಶಕ್ತಿ ನಮ್ಮ ಚಕ್ರಗಳಿಗೆ ಸಾಧ್ಯವಾಗುವುದಿಲ್ಲ.









ಅದನ್ನು ಔರಾ ಸ್ಕ್ಯಾನಿಂಗ್ ಯಂತ್ರ ಸಹಾಯದಿಂದ ಪತ್ತೆ ಹಚ್ಚಿ ಊರ್ಜಾ ವೃದ್ಧಿ ಮಾಡುವ ಆಯಾ ಗ್ರಹಗಳ ರತ್ನಧಾರಣೆಯ ವಿಧಾನಕ್ಕೆ, ವರ್ಣ ಚಿಕಿತ್ಸೆ ಮತ್ತು ವಾಸ್ತುವಿನಲ್ಲಿಯೂ ವಿವಿಧ ವರ್ಣಸಂಯೋಜಿತ ಯಂತ್ರಗಳು ಹಾಗೂ ತಾಮ್ರದ ವಿವಿಧ ಪ್ರಕಾರದ ಯಂತ್ರ ಸ್ಥಾಪಿಸುವುದಕ್ಕೆ ಊರ್ಜಾವಾಸ್ತು ಎಂದು ಹೆಸರು. ಹಲವು ಸಂಶೋಧನಾತ್ಮಕ ಪ್ರಯೋಗಗಳನ್ನು ಮಾಡಿ ಈ ವಿಧಾನದಿಂದ ಹಲವರಿಗೆ ಉತ್ತಮ ಫಲಕೊಟ್ಟಿರುವ ವಾಸ್ತು ಮತ್ತು ವರ್ಣಚಿಕಿತ್ಸಾ ತಜ್ಞರಾದ ಶ್ರೀ ಅನಂತರಾಮ ಭಟ್ಟರು ಮೂಲತಃ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ನೀವಣೆ ಗ್ರಾಮದಲ್ಲಿ ಜನಿಸಿದವರಾಗಿದ್ದು, ಶ್ರೀ ಕೂಡಲಿ ಶೃಂಗೇರಿ ಮಠ ಹಾಗೂ ವಾರಾಣಸಿಯಲ್ಲಿ ವೇದ, ಸಂಸ್ಕೃತ ಜ್ಯೋತಿಷ್ಯಾದಿ, ಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿದವರಾಗಿದ್ದು, ಪ್ರಸ್ತುತ ಕಾಂದಿವಲಿ ಪಶ್ಚಿಮ ಮುಂಬಯಿಯಲ್ಲಿ 30 ವರ್ಷಗಳಿಂದ ವಾಸವಾಗಿದ್ದು, ಪೌರೋಹಿತ್ಯ, ಜ್ಯೋತಿಷ್ಯ ಹಾಗೂ ವಾಸ್ತು ಸಲಹೆಗಾಗಿ ಪ್ರಸಿದ್ಧರಾಗಿದ್ದಾರೆ ಹಾಗೂ ಜನಾನುರಾಗಕ್ಕೆ ಪಾತ್ರರಾಗಿದ್ದಾರೆ. ತಮ್ಮ ಪ್ರತಿ ಮಾಸದ ಸಮಯದಲ್ಲಿ ಕೆಲವು ದಿವಸಗಳನ್ನು ಕರ್ನಾಟಕಕ್ಕಾಗಿ ಮೀಸಲಿಟ್ಟಿದ್ದಾರೆ. ಇದೇ ವಿಷಯದಲ್ಲಿ ಕರ್ನಾಕದ ವಿವಿಧೆಡೆಯಲ್ಲಿ ಹಲವರಿಗೆ ಉತ್ತಮವಾದ ಫಲಾನುಭವವನ್ನು ಉಣಬಡಿಸಿದ್ದಾರೆ.

**ರತ್ನ ಚಿಕಿತ್ಸೆಯ ಮೂಲಕ ವಿವಿಧ ಪ್ರಕಾರಗಳ ಜಟಿಲ ಸಮಸ್ಯೆಯಿಂದ ಹಲವರು ಪಾರಾಗಿರುತ್ತಾರೆ. ವಾಸ್ತು ಸಮಸ್ಯೆ, ವಿದ್ಯೆ, ವಿವಾಹ, ಉದ್ಯೋಗ, ಸಂತಾನ, ಗೃಹ ಕಲಹ ಇತ್ಯಾದಿ ಸಮಸ್ಯೆ ಉಳ್ಳವರು ಸಂಪರ್ಕಿಸಬಹುದಾಗಿದೆ:**

**+91 9869344425, 022-28690168.**